18. "ಫೈನಾನ್ಸ ಕಮಿಟಿ" ಯುವರು ತಯಾರ್ಮಾಡಿದ 1906—07ನೆ ಸಾಲಿನ ಡಿಸ್ಟ್ರಿಕ್ಟ ಫಂಡಿನ ಜಮಾ ಖರ್ಚು ಲೆಖ್ಖಗಳನ್ನು ಮತ್ತು ಬೇರೆಬೇರೆ ಹೆಡ್ಡುಗಳಲ್ಲಿ ಉಂಟಾಗಿರತಕ್ಕ ವ್ಯತ್ಯಾಸಗಳಿಗೆ ಸಮಜಾಯಿಷಿಗಳನ್ನು ತೋರಿಸುವ ಪಟ್ಟಿಯನ್ನು ಸಹ ಓದಿ ರಿಕಾರ್ಡು ಮಾಡಲಾಯಿತು.

19. ಎಡೇಹಳ್ಳಿ ಆಸ್ಪತ್ರೆ ಅಸಿಸ್ಟೆಂಟ್ ಮುತ್ತಿನ ಕೊಡ್ಯಕ್ಕೆ ಸಂತೆ ದಿವಸ ಹೋಗಿ ಅಲ್ಲಿರತಕ್ಕ ರೋಗಿಗಳಿಗೆ ಔಷಧಗಳನ್ನು ವಾರಕ್ಕೊಂದಾವರ್ತಿ ಕೊಡಬೇಕೆಂಬ ಮೆಹಳ್ಳಿ ಸಬ್ ತಾಲ್ಲೂಕು ಬೋರ್ಡಿನವರು 31—8—07ನೆ ಮಜ್ಕೂರಿನಲ್ಲಿ ಮಾಡಿದ ತೀರ್ಮಾನವನ್ನು ಡಿಸ್ಟ್ರಿಕ್ಟ ಬೋರ್ಡಿನವರ ಅಲೋಚನೆ ಬಗ್ಗೆ ಮಲಪೂಫಿಸಿ ಬಂದ 12—9—07ನೆ ಮಜ್ಕೂರಿ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ಯಾದಿ ಓದಲಾಗಿ ಈ ವಿಚಾರದಲ್ಲಿ ಗೌರ್ನ್‌ಮೆಂಟಿನವರು ಆಖೈರು ಹುಕುಂ ಕೊಟ್ಟಿರುತ್ತಾರಾದಕ್ಕಾರಣ ಈ ಪ್ರಶ್ನೆಯನ್ನು ಪುನಹ ಹಾಕಬೇಕಾದ ಅವಶ್ಯಕತೆ ಇಲ್ಲವೆಂಬುದಾಗಿ ತೀರ್ಮಾನಿಸಲಾಯಿತು.

20. ಕಡೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕ ಪಟ್ಟಣಗೆರೆಯಲ್ಲಿರತಕ್ಕ ಶೇದೋಭಾವಿಗೆ ಸುಟ್ಟಕಲ್ಲು ಕಟ್ಟಿಸತಕ್ಕ ಬಗ್ಗೆ ತಯಾರಾಗಿ ಬಂದ 460 ರೂಪಾಯಿಗಳ ಅಂದಾಜಾವನ್ನು ಡಿಸ್ಟ್ರಿಕ್ಟ ಬೋರ್ಡಿನವರ ಪೆಂಜಾರಾತಿ ಬಗ್ಗೆ ಮಲಪೂಫಿಸಿ ಬಂದ 12—9—07ನೆ ಮಜ್ಕೂರಿ 44ನೆ ನಂಬರು ಡಿವಿಜ್ ಅಸಿಸ್ಟೆಂಟ್ ಕಮಿಷನರವರ ಯಾದಿ ಓದಲಾಗಿ ಈ ವಿಚಾರವನ್ನು ಬಡ್ಜಟ್ ಮೀಟಿಂಗಿನಲ್ಲಿ ಚರ್ಚಿಸಬೇಕಾಗಿ ತೀರ್ಮಾನಿಸಲಾಯಿತು.

21. ಗ್ರಾಮಪಂಚಾಯಿತಿಯಲ್ಲಿ ಮನೆ ಕಂದಾಯವನ್ನು ಕೊಡದೆ ತಪ್ಪಿದವರಿಗೆ ಕೊಡತಕ್ಕ ತಗಾದೆ ನೋಟೀಸಿನ ಮೇಲ್ಗೆ ಸದರಿ ನೋಟ್ಸಿನುಗಳಲ್ಲಿ ಕಂಡ ಬಾಕಿಯು ಬಂದು ರೂಪಾಯಿಗೆ ಅತಿಕ್ರಮಿಸದೆ ಇದ್ದಲ್ಲಿ 0—2—0 ಆಣೆಗಳ ಫೀ ವಸೂಲ್ಮಾಡಬೇಕೆಂತಲೂ ಐದು ರೂಪಾಯಿಗೆ ಮೀರಿ 5 ರೂಪಾಯಿಗಳಿಗೆ ಮೀರದಿದ್ದಲ್ಲಿ ಪ್ರತಿ ಒಂದು ನೋಟೀಸಿಗೂ 4 ಆಣೆಯನ್ನೂ, 5 ರೂಪಾಯಿಗಾಗಿ ಮೇಲ್ಪಟ್ಟು ಬಾಕಿ ನವೂದಿರುವ ಬಾಕಿಯುಳ್ಳ ಪ್ರತಿ ಒಂದು ನೋಟೀಸಿಗೂ 8 ಆಣೆ ಫೀಜು ವಸೂಲ್ಮಾಡಬೇಕೆಂತಲೂ ಹಲಸಿನ 18—9—07ನೆ ಮಜ್ಕೂರಿ ಡಿವಿಜ್ ಅಸಿಸ್ಟೆಂಟ್ ಕಮಿಷನರವರ 293ನೆ ಯಾದಿ ಓದಲಾಗಿ ಈ ವಿಚಾರವನ್ನು ಮುಂದಿನ ಮೀಟಿಂಗಿನಲ್ಲಿ ಚರ್ಚಿಸಬೇಕಾಗಿ ತೀರ್ಮಾನಿಸಲಾಯಿತು.

22. ಮುಂದಿನ ಡಿಸ್ಟ್ರಿಕ್ಟ ಬೋರ್ಡು ಮೀಟಿಂಗ್ ನವಂಬರ್ 30ನೆ ಕನಿವಾರ ನಡಿಯಬೇಕಾಗಿ ತೀರ್ಮಾನಿಸಲಾಯಿತು.

ಬಿ. ಜೆ. ಕುಮಾರಸಾಮಿ ನಾಯಕ್,
ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು ನೆ ನವಂಬರ್ 1907.

ಚಿತ್ರದುರ್ಗದ ಡಿಸ್ಟ್ರಿಕ್ಟ ಜೆಳ್ಳಕೆರೆ ತಾಲ್ಲೂಕು ವಿಶ್ವಾಸಾಬಿಹಳ್ಳಿಬಳಿ ಹೊಸದಾಗಿ ಕಟ್ಟಿ ಇರುವ ರಾಷ್ಟತಲಾವ್‌ಕೆರೆ ಅಚ್ಚುಕಟ್ಟಿಗೆ ಕೆಳಗಿ ಇರುವ ಜಮೀನುಗಳ ಹಂಡುವಳಿ ಹಕ್ಕನ್ನು ವಿಶ್ವಾಸಾಬಿಹಳ್ಳಿ ಬಳಿ ಸ್ರ 1908ನೆ ಇಸವಿ ಜನವರಿ ತಾರೀಖು 6ನೆ ಸೋಮವಾರದ ದಿನ ಮತ್ತು ಮುರುದಿವಸಗಳಲ್ಲಿ ಬಹಿರಂಗವಾಗಿ ಹರಾಜು ಮಾಡಿಸುತ್ತೆ ಏಂಬದಾಗಿ ಈ ಮೂಲಕ ನೋಟೀಸನ್ನು ಕೊಟ್ಟಿರುತ್ತೆ.

ಜ್ಞಾಪ್ತಿ ತಪಶೀಲುಗಳನ್ನು ಸ್ರ 1907ನೆ ಮಜ್ಕೂರಿ ನವಂಬರು ತಾರೀಖು 28ನೆ ಗೆಜೆಟ್ಟಿನ II ನೆ ಭಾಗದ 554—555—556ನೆ ಪಾನುಗಳನ್ನು ನೋಡಿಕೊಳ್ಳಬೇಕು.

ಎಂ. ಚಂಗೈಯ್ಯಕೆಟ್ಟಿ,
ಡೆಪ್ಯೂಟಿ ಕಮಿಷನರ್.

1907ನೆ ಇಸವಿ ಸೆಪ್ಟಂಬರ್ ತಾರೀಖು 25ನೆ ಬುಧವಾರ ನಡೆದ ಚಿತ್ರದುರ್ಗದ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

ಪ್ರೆಸಿಡೆಂಟರು—ಎಂ. ಚಂಗಯ್ಯ ಕೆಟ್ಟರವರು, ಎಸ್ಕ್ವೈಯರ್, ಬಿ. ಎ.
ವೈಸ್ ಪ್ರೆಸಿಡೆಂಟರು—ಬಿ. ಭೀಮರಾಯರವರು, ಎಸ್ಕ್ವೈಯರ್, ಬಿ. ಎ.

ಆಫಿಷಿಯಲ್ ಮೆಂಬರುಗಳು.

1. ಚಿತ್ರದುರ್ಗ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರು, (ಗೈರ್‌ಹಾಜರ್).
2. ಡಿಸ್ಟ್ರಿಕ್ಟ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.
3. ದಾವಣಗೆರೆ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
4. ಚಿತ್ರದುರ್ಗದ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
5. ಸ್ಕೂಲುಗಳ ಡೆಪ್ಯೂಟಿ ಇನ್ಸ್‌ಪೆಕ್ಟರವರು.

ನಾನ್ ಆಫಿಷಿಯಲ್ ಮೆಂಬರುಗಳು.

1. ಮೌ॥ ಸೈಯದ್ ಮಹಮ್ಮದ್ ಹಸೇ ಸಾಹೇಬರವರು, (ಗೈರ್‌ಹಾಜರ್).
2. ,, ಟಿ. ಸ್ವಾಮಿರಾಯಾಚಾರ್ರು, ಗೈರ್‌ಹಾಜರ್.
3. ,, ಪಟೇಲ್ ಕೆಂಚವೀರಪ್ಪನವರು.

4. ಮಿ॥ ನಾಯಕನಹಟ್ಟಿ ಹನುಮಂತಪ್ಪನವರು.
5. ,, ನೇರ್ಲಹಳ್ಳಿ ಸಂಣಪ್ಪನವರು.
6. ,, ಭೂರಿ ಸಂಣಪ್ಪನವರು.
7. ,, ಜಗಲೂರು ಫಕೀರ್ ಸಾಹೇಬರವರು.
8. ,, ಸಿ. ಎಸ್. ಕೃಷ್ಣಪ್ಪನವರು, ಗೈರ್ ಹಾಜರ್.
9. ,, ಗುಂಡೇರಿ ಗೋಪಾಲಯ್ಯನವರು.
10. ,, ನಾಡಿಗ ಸಿದ್ದರಾಮಯ್ಯನವರು.
11. ,, ಹೊನ್ನಾದುರ್ಗದ ಖಾನ್‌ಸಾಹೇಬರವರು.
12. ,, ಪಾಳ್ಯದಹಳ್ಳಿ ನಾಗಪ್ಪನವರು.
13. ,, ಹರಿಹರದ ಬಾಲಕೃಷ್ಣರಾಯರವರು.
14. ,, ದಾವಣಗೆರೆ ಷಡಾಕ್ಷರಸ್ವಾಮಿಯವರು, ಗೈರ್‌ಹಾಜರ್.
15. ,, ಡಿಟೋ ನಬೀ ಸಾಹೇಬರವರು, ಗೈರ್ ಹಾಜರ್.
16. ,, ಹಿರಿಯೂರು ತಾಲ್ಲೂಕು ಚೆನ್ನಗಾರಯ್ಯನವರು.
17. ,, ಲೋಕಿಕೆರೆ ಹನುಮಂತಪ್ಪನವರು, ಗೈರ್ ಹಾಜರ್.
18. ,, ಸಾವುಕಾರ್ ವೀರಣ್ಣನವರು, ಗೈರ್ ಹಾಜರ್.

I. 1907ನೆ ಇಸವಿ ಆಗಸ್ಟು ಮಾಹೆ 28ರಲ್ಲು ನಡೆದ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನ ಪ್ರೊಸೀಡಿಂಗ್ಸನ್ನು ಓದಿ ದೃಢಪಡಿಸಲಾಯಿತು.

II. ಫೈನಾನ್ಸು ಕಮಿಟಿಯವರಿಂದ ತಲ್ಪಿದ 1906–07ನೆ ಸಾಲಿನ ಡಿಸ್ಟ್ರಿಕ್ಟ್ ಫಂಡು ಅಡ್ಮಿನಿಸ್ಟ್ರೇಷನ್ ರಿಪೋರ್ಟನ್ನು ಓದಲಾಯಿತು.

ಇದನ್ನು ಅಂಗೀಕರಿಸಿ ಗವರ್ನ್‌ಮೆಂಟಿಗೆ ರವಾನಿಸಬೇಕಾಗಿ ತೀರ್ಮಾನಿಸಲಾಯಿತು.

III. ವಿಲೇಜ್ ಯೂನಿರ್ಪುಗಳಲ್ಲಿ ನೋಟಿಸ್ ಫೀ ವಸೂಲ್ಮಾಡತಕ್ಕ ವಿಷಯದಲ್ಲಿ ರಿಪೋರ್ಟು ಕಳುಹಿಸಬೇಕಾಗಿ ಗವರ್ನ್‌ಮೆಂಟಿನಿಂದ ತಲ್ಪಿದ ಸರ್ಕ್ಯುಲರ್ ಓದಲಾಯಿತು.

ಅದರಲ್ಲಿ ಪ್ರೊಪೋಜ್ ಮಾಡಿರುವ ಮೇರೆ ನೋಟಿಸ್ ಫೀ ವಸೂಲ್ಮಾಡತಕ್ಕದ್ದು ಅನಾವಶ್ಯಕವೆಂತ ತೀರ್ಮಾನಿಸಲಾಯಿತು.

IV. ಮೈಸೂರು ಸಂಸ್ಥಾನದಲ್ಲಿ (Public Health) ಡಿಪಾರ್ಟ್‌ಮೆಂಟ್ ಸ್ಥಾಪನೆ ಮಾಡತಕ್ಕ ಬಗ್ಗೆ ಆಗಿರುವ ಏರ್ಪಾಡನ್ನು ಮಂಜೂರ್ಮಾಡಿರುವದಾಗಿ ಗವರ್ನ್‌ಮೆಂಟಿನಿಂದ ತಲ್ಪಿದ ಪ್ರೊಸೀಡಿಂಗ್ಸು ಓದಲಾಯಿತು.

ಇದನ್ನು ಮುಂದಿನ ಮೀಟಿಂಗ್‌ನಲ್ಲಿ ಚರ್ಚಿಸಬೇಕಾಗಿ ತೀರ್ಮಾನಿಸಲಾಯಿತು.

V. ರೈತರಿಗೆ ಬೀಜದ ಹೋರಿಗಳನ್ನು ಅಮೃತಮಹಲ್ ಇಲಾಖೆಯಿಂದ ಕೊಡಿಸತಕ್ಕ ವಿಚಾರದಲ್ಲಿ ತಲುಪಿದ ಗವರ್ನ್‌ಮೆಂಟ್ ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

VI. ಈ ಕೆಳಗೆ ಕಂಡ ಪ್ರಜಾಪ್ರತಿ ಮೆಂಬರುಗಳಿಂದ ತರಲ್ಪಟ್ಟ ಅಂಶಗಳನ್ನು ಚರ್ಚಿಸಲಾಯಿತು.

ಮೆಂಬರ್ ಹೆಸರು.	ವಿಷಯ.	ತೀರ್ಮಾನ.
(1) ಮೆ॥ ಮೂಡ್ಲಗಿರಿಯಪ್ಪ, ಜಗಲೂರು ತಾಲ್ಲೂಕು.	ಬೆಳಚೋಡಿನಿಂದ ಭರಮಸಾಗರಕ್ಕೆ ಹೋಗತಕ್ಕ ಕಾಲುದಾರಿ ಕಪ್ಪು ಭೂಮಿಯಾದ್ದರಿಂದಲೂ ಮತ್ತು ಅಲ್ಲಲ್ಲಿ ಹಳ್ಳ ತಿಟ್ಟುಗಳು ಇರುವುದ್ದರಿಂದಲೂ ಹೊಸದಾಗಿ ರಸ್ತೆ ಆಗಬೇಕೆಂಬ ವಿಷಯ.	ಡಿಸ್ಟ್ರಿಕ್ಟ್ ಬೋರ್ಡಿನಿಂದ ಈ ಸಾಲಿಗೆ ಮಂಜೂರಾಗಿರುವ ರಸ್ತೆಗಳ ಪೈಕಿ ಇದು ನಾಲ್ಕನೇದಾಗಿರುತ್ತೆ.
(2) ,, ಫಕೀರ್ ಸಾಹೇಬರು, ಜಗಲೂರ್	ಜಗಲೂರ್-ದಾವಣಗೆರೆ ರಸ್ತೆಯನ್ನು ರಿಪೇರಿ ಮಾಡಿಸಬೇಕೆಂತ.	ಚಾಲ್ತಿ ಸಾಲಿಗೆ ಮಂಜೂರಾಗಿರತಕ್ಕ ಬಡಜಟ್ಟಿನಲ್ಲಿ ರಸ್ತೆಗಳ ರಿಪೇರಿಗೋಸ್ಕರ 1,000 ರೂಪಾಯಿಗಳು ಮಂಜೂರ್ಮಾಡಿದೆ.
(3) ,, ಮಾಚೇನಹಳ್ಳಿ ವೆಂಕಣ್ಣನವರು, ಮೊಳಕಾಲ್ಮೂರು.	ಮೊಳಕಾಲ್ಮೂರಿನಿಂದ ನಂಕಿದೇವರ ಬೆಟ್ಟಕ್ಕೆ ರಸ್ತೆ ಆಗಬೇಕಲ್ಲದೆ ಅಲ್ಲಿಗೆ ಬರತಕ್ಕ ಯಾತ್ರಾ ಜನರ ಅನುಕೂಲದ ಬಗ್ಗೆ ಬಂದು ಕಟ್ಟಿಸತಕ್ಕ ವಿಷಯದಲ್ಲಿ ಏರ್ಪಾಟು ಇಡಿಸಬೇಕೆಂತ.	ಈ ವಿಷಯವನ್ನು ತಾಲ್ಲೂಕು ಬೋರ್ಡಿನವರ ಅಭಿಪ್ರಾಯದ ಬಗ್ಗೆ ರಿಫರ್ ಮಾಡಿದೆ.
(4) ,, ವೆಂಕಟಗಿರಿಯಪ್ಪ, ದಾವಣಗೆರೆ.	ಸಗಟೆ ಮತ್ತು ಕರ್ಲೆ ಹಳ್ಳಗಳಿಗೆ ಸೇತುವೆ ಕಟ್ಟಿಸಿಕೊಡಬೇಕೆಂಬ ವಿಷಯ.	ಡಿಟೋ
(5) ,, ಬಿ. ವಿ. ನಾರಣಪ್ಪನವರು, ಹೊಸದುರ್ಗ.	ಹೊಸದುರ್ಗ ಲೋಕಲ್ ರಿಲೀವ್ಸ್ಟೇಷನ್ ರಸ್ತೆಯನ್ನು ಚನ್ನಗಿರಿ-ಹೊಳಲೆರೆ ರಸ್ತೆಗೆ ಕೇರಿಸತಕ್ಕ ಬಗ್ಗೆ 10 ಮೈಲಿ ಫಾಸಲೆ ರಸ್ತೆಯನ್ನು ಹೊಸದಾಗಿ ಹಾಕಿಸಿಕೊಡಬೇಕಾಗಿ.	ಈ ರಸ್ತೆ ಆಗತಕ್ಕದ್ದು ಅನಾವಶ್ಯಕವಾದ್ದಾಗಿದೆ.

VII. ಚಿತ್ರದುರ್ಗ ಡಿ॥ ಲಫೀಸಿಗೆ ಹೊಸದಾಗಿ ಗವರ್ನ್‌ಮೆಂಟಿನಿಂದ ಮಂಜೂರಾಗಿರುವ ಲೋಕಲ್ ಫಂಡು ಗುಮಾಸ್ತೆಯ ಉಪಯೋಗದ ಬಗ್ಗೆ ಒಂದು ಮೇಜು, ಕುರ್ಚಿ, ಪಿರ್ಜಹೋಲ್ ಈ ಮೂರು ಸಾಮಾನುಗಳಿಗೆ ತಗಲತಕ್ಕ 40 ರೂಪಾಯಿಗಳ ಅಂದಾಜಾವನ್ನು ಓದಿ ಅಪ್ರೂವ್ ಮಾಡಲಾಯಿತು.

VIII. ಮಾರಿಕಣಿವೆ ಕೆಲವು ಕಾಲದವರಿಗೆ ಚಿತ್ರದುರ್ಗ ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನೀರ್ ಸಾಹೇಬರವರ ಹೆಡ್‌ಕ್ವಾರ್ಟರ್ಸಾಗಿರುವುದರಿಂದ ಸದರಿ ಸ್ಥಳದಲ್ಲಿ ಬ್ಯಾರೆ ಯಾವ ಕಟ್ಟಡವು ಮುಸಾಫರುಖಾನೆಯಾಗಿ ಉಪಯೋಗಿಸುವದಕ್ಕೆ ಇಲ್ಲವಾದ ಸಬಬು ಅಸಿಸ್ಟೆಂಟ್ ಇಂಜಿನೀರಿನ ಕ್ವಾರ್ಟರುಗಳ ಪೈಕಿ ಬಂದನ್ನು ಪ್ರಸ್ತುತಕ್ಕೆ ಮುಸಾಫರುಖಾನೆಗೋಸ್ಕರ ತೆಗದುಕೊಳ್ಳಬಹುದಾಗಿರುತ್ತೆಂಬ ವಿಷಯವನ್ನು ತಿಳಿಸುವ ಸೂಪರಿಟೆಂಡಿಂಗ್ ಇಂಜಿನೀರ್ ಸಾಹೇಬರವರಿಂದ ತಲುಪಿದ ಲೆಟರ್ ಓದಿ ರಿಕಾರ್ಡು ಮಾಡಲಾಯಿತು.

IX. ದಾವಣಗೆರೆ ತಾಲ್ಲೂಕು ಬೋರ್ಡು ಉಪಯೋಗದ ಬಗ್ಗೆ 15 ಕುರ್ಚಿಗಳು ಅವಶ್ಯಕವೆಂದು ದಾವಣಗೆರೆ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತಲ್ಪಿರುವ ಯಾದಿಯನ್ನು ಓದಲಾಯಿತು.

ಅಪ್ರೂವ್ ಮಾಡಿದೆ.—ತಾಲ್ಲೂಕು ಬೋರ್ಡುಗಳ ಉಪಯೋಗದ ಬಗ್ಗೆ ಬೇಕಾಗುವ ಫರ್ನೀಚರ್‌ಗೆ ಬಂದು ಒಟ್ಟು ಲಿಸ್ಟು ತಯಾರ್ಮಾಡಿಸಿ ಅದಕ್ಕೆ ಬೇಕಾಗುವ ಹಣವನ್ನು ಮುಂದಿನ ವರ್ಷದ ಬಡಜಟ್‌ನಲ್ಲಿ ಸೇರಿಸಿ ಮಂಜೂರ್ ಬಗ್ಗೆ ಗವರ್ನ್‌ಮೆಂಟಿಗೆ ಕಳುಹಿಸಬೇಕಾಗಿ ತೀರ್ಮಾನಿಸಲಾಯಿತು.

X. ಹೊಳಲ್ಕೆರೆ ತಾಲ್ಲೂಕಿಗೆ ಹೊಸದಾಗಿ ಮಂಜೂರ್ಮಾಡಿರುವ ಲೋಕಲ್ ಫಂಡ್ ಗುಮಾಸ್ತೆಯ ಉಪಯೋಗದ ಬಗ್ಗೆ ಬೇಕಾದ ಫರ್ನೀಚರ್‌ಗೋಸ್ಕರ ಅಮಲ್ದಾರ್ರಿಂದ ತಲ್ಪಿದ 20 ರೂಪಾಯಿಗಳ ಅಂದಾಜಾ ಓದಲಾಯಿತು.

IXನೆ ಪ್ಯಾರಾಗ್ರಾಫ್‌ನಿನ ರಿಜೊಲ್ಯೂಷ್ಯನ್ ಇದಕ್ಕೆ ಲಗಾವಾಗುತ್ತೆ.

XI. ಹೊಳಕಾಲ್ಮುರುವಿನಲ್ಲಿ ಹಾಲಿ ಇರತಕ್ಕ ಮುಸಾಫರ್‌ಖಾನೆಗೆ ಲಗತ್ತಾಗಿ ಒಂದು ಇನ್‌ಸ್ಪೆಕ್ಷನ್ ಬಂಗ್ಲೆ ಕಟ್ಟಿಸತಕ್ಕ ಬಗ್ಗೆ ಮುಟ್ಟುವ 499 ರೂಪಾಯಿಗಳಿಗೆ ಒಂದು ಅಂದಾಜಾವನ್ನು ಮಂಜೂರ್ ಬಗ್ಗೆ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರವರ 354ನೆ ನಂಬರು ಇತ್ತಿಲ್ಲೆಯೊಂದಿಗೆ ತಲುಪಿರುವದನ್ನು ಓದಲಾಯಿತು.

ಅಪ್ರೂವ್ ಮಾಡಿದೆ—ಚಾಲ್ತಿ ಸಾಲ್ ಬಡ್ಜಟ್‌ನಲ್ಲಿ ಮಂಜೂರ್ಮಾಡಿರುವ ಹಣದ ಪೈಕಿ ಕೊಡಬಹುದಾಗಿ ತೀರ್ಮಾನಿಸಲಾಯಿತು.

XII. ಹೊಸದಾಗಿ ಸ್ಯಾಂಕ್ಷನ್ ಮಾಡಿರುವ ಲೋಕಲ್ ಫಂಡು ಗುಮಾಸ್ತೆ ಮತ್ತು ಪಬ್ಲಿಕ್ ಪ್ರೊಸಿಕ್ಯೂಟರ್ ಮುತ್ಸದ್ದಿ ಇವರ ಉಪಯೋಗದ ಬಗ್ಗೆ ಬೇಕಾಗುವ ಫರ್ನೀಚರ್ ತರಿಸಿಕೊಡಬೇಕಾಗಿ ಹರಿಯೂರು ತಾಲ್ಲೂಕು ಅಮಲ್ದಾರ್ರಿಂದ ತಲ್ಪಿದ ರಿಪೋರ್ಟು ಓದಲಾಯಿತು.

IXನೆ ಪ್ಯಾರಾಗ್ರಾಫ್‌ನಲ್ಲಿ ಮಾಡಿರುವ ತೀರ್ಮಾನವು ಇದಕ್ಕೆ ಲಗಾವಾಗುತ್ತೆ.

XIII. ಬರುವ ಮಿಟಿಂಗ್ 1907ನೆ ಇಸವಿ ಡಿಸೆಂಬರ್ ತಾರೀಖು 21ಕ್ಕೆ ನಡೆಯತಕ್ಕದ್ದೆಂದು ಗೊತ್ತುಮಾಡಲಾಯಿತು.

ಎಂ. ಚಂಗೈಯ್ಯಶೆಟ್ಟಿ,
ಪ್ರೆಸಿಡೆಂಟ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ಯ 1907—08ನೆ ಇಸವಿ ವಿಸ್ ಅರ್ಜೀ ನಂಬರು 305.

ಅರ್ಜೀದಾರರು ಬೆಂಗಳೂರು ತಾಲ್ಲೂಕು ಕೃಷ್ಣರಾಜಪುರದ ಹೋಬಳಿ ರಾಜೇನಹಳ್ಳಿಲಿರುವ ಮುನಿಯಪ್ಪನ ಮಗ ಚನ್ನರಾಯಪ್ಪ ಮೈನರ್, ಗಾರಡಿಯರ್ ಹನುಮಂತರಾಯಪ್ಪ, ಮೈನರಾದ ಚನ್ನರಾಯಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಚನ್ನರಾಯಪ್ಪನಿಗೆ ಮುಖ್ತ್ಯಾರನಾಮೆದಾರನಾಗಬೇಕೆಂಬ ಹಕ್ಕಿನಮೇಲೆ ರಾಜೇನಹಳ್ಳಿ ಹನುಮಂತರಾಯಪ್ಪನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾನೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ಯ 1907ನೆ ಇಸವಿ ಡಿಸೆಂಬರ್ ತಾರೀಖು 13ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ಯ 1907ನೆ ಇಸವಿ ನವಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1907—08ನೆ ವಿ॥ ಅರ್ಜೀ ನಂಬರ್ 420.

ಬೆಂಗಳೂರು ಸಿಟಿ ಪೊಲೀಸ್ ಇಲಾಖೆಯಲ್ಲಿ 116ನೆ ನಂಬರ್ ಕಾನಿಸ್ಟೇಬಲಾಗಿದ್ದು ಮೃತಪಟ್ಟ ಗಣೇಶರಾವ್ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಅಂಚೆಪೇಟೆಲಿರುವ ಮರಾಟಿಗರ ವೆಂಕಟರಾವ್ ಉರಫ್ ಲಕ್ಷ್ಮಣರಾವು ಮೃತಪಟ್ಟ ಸದರೀ ಗಣೇಶರಾಯರಿಗೆ ಖಾಸ ತಂದೆ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಗಣೇಶರಾವ್ ಜಿಂದಗಿ ಬಗ್ಯಾಗಿ ಬರತಕ್ಕ ಗ್ರಾಂಟು ಬಾಬತು 121—8—0 ರೂಪಾಯಿ ಸಾಲವನ್ನು ವಸೂಲಿ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟ್‌ಗೆ ಪಾಯಿಷ್ ಮಾಡುತ್ತಾರೆ.